


ವಸುಮತಿ ಉಡುಪ
ಕಲೆ: ಎಚ್.ಎಸ್. ಮೋನಪ್ಪ

# ಮಗಳು ಖಾಲಿ ಮಾಡಿದ ಮನದಂಗಳದಲ್ಲಿ ಸೊಸೆ ಬಿಡಿಸಿದ ರಂಗೋಲಿ

ಮಗಳ ಮೇಲೆ ಯಾವತ್ತಿನಿಂದಲೋ ಅವನಿಗೆ ಸಣ್ಣದೊಂದು ಅಸಹನೆ ಇತ್ತೇ? ಅದು ಕಾರಣವಾಗಿ ಅವಳ ಬಗ್ಗೆ ಮತ್ತಷ್ಟು ಕಟುವಾಗುತ್ತಿದ್ದಾನೆಯೇ? ಇಲ್ಲ ಎಂದು ಎದೆ ತಟ್ಟಿಕೊಂಡು ಹೇಳುವಂತಿಲ್ಲ.

ಮಗಳಿಗೆ ತನ್ನ ಅಕ್ರಮ ಸಂಬಂಧದ ಬಗ್ಗೆ ಗುಮಾನಿ ಹುಟ್ಟಿಕೊಂಡಿದೆಯೆಂಬುದು ಅರಿವಾದ ಕ್ಷಣದಿಂದ ಅವನಲ್ಲೇನೋ ಅಪರಾಧೀಭಾವ ಕಾಡುತ್ತಿದ್ದದ್ದು ಸುಳ್ಳಲ್ಲ. ಬಾಯಿ ಬಿಟ್ಟು ನೇರವಾಗಿ ಅವಳು ಏನೂ ಹೇಳಲಿಲ್ಲ. ಆದರೂ ಅವಳ ದೃಷ್ಟಿಯಲ್ಲಿ ತಾನು ಕೆಳಮಟ್ಟಕ್ಕೆ ಇಳಿದುಬಿಟ್ಟೆ ಎನ್ನುವ ನೋವು. ಮುಜುಗರ. ಅದರಿಂದ ಮಗಳಿಗೆ ಯಾವ ಕಷ್ಟ ಬಂತು? ಮನೆಯಲ್ಲಿ ಅನುಕೂಲೆಯಾದ ಮಡದಿ ಇದ್ದರೂ ಪರಸ್ತ್ರೀಸಂಗಕ್ಕೆಳಸುವವರು ಬೇಕಾದಷ್ಟು ಜನ ಇಲ್ಲವೇ? ತಾನು ಹೆಂಡತಿಯ ನೆನಪಿಗೆ ಅನ್ಯಾಯ ಮಾಡಿದೆ ಎನ್ನುವುದು ಒಂದು ಭ್ರಮೆ. ಕೇವಲ ನೆನಪಿನಿಂದ ಜೀವನ ನಡೆಸುವುದಕ್ಕಾಗುತ್ತದೆಯೇ? ತಾನೂ ಉಪ್ಪು, ಹುಳಿ, ಖಾರ ತಿನ್ನುವ ಮನುಷ್ಯ. ಮಕ್ಕಳಿಗೆ ಯಾವ ಕಷ್ಟವೂ ಆಗದಂತೆ, ಅವರ ನೆಮ್ಮದಿಗೆ ಭಂಗ ಬರದಂತೆ ತನ್ನ ಸುಖ ಕಂಡುಕೊಂಡರೆ ಅದರಲ್ಲೇನಿದೆ ತಪ್ಪು?

‘ಕೆಳಗೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲ’ ಎನ್ನುವಂತೆ ತನ್ನನ್ನು ಸಮರ್ಥಿಸಿಕೊಂಡ ಚಿದಾನಂದ. ಇಷ್ಟಕ್ಕೂ ಮಗಳಿಗೆ ಗುಮಾನಿ ಬಂದಿರಬಹುದೇ ಹೊರತು ಅದನ್ನು ಸತ್ಯವೆಂದು ಸಾಬೀತುಪಡಿಸಲು ಅವಳಲ್ಲಿ ಯಾವ ಪುರಾವೆಗಳೂ ಇಲ್ಲ ಎಂದು ಅವನ ನಂಬಿಕೆ. ಗುಮಾನಿ ಬಂದಿರಬಹುದೆನ್ನುವುದೂ ‘ಕಳ್ಳನ ಮನಸ್ಸು ಹುಳ್ಳಗೆ’ ಎನ್ನುವಂತೆ ತನ್ನದೇ ಭ್ರಮೆ ಇರಬಹುದೇನೋ ಎನ್ನುವ ಕಿಂಚಿತ್ ಸಮಾಧಾನ. ಅವಳಿಗೆ ಅನುಮಾನ ಬರುವಂಥ ಸನ್ನಿವೇಶಗಳಲ್ಲೆಲ್ಲಾ ತನ್ನ ಸಮರ್ಥನೆ ಕೊಟ್ಟಿದ್ದಾಗಿದೆ. ಒಪ್ಪಲಿ, ಬಿಡಲಿ, ಹೌದೋ, ಅಲ್ಲವೋ? ಎನ್ನುವ ದ್ವಂದ್ವ ಹುಟ್ಟಿದರೂ ಸಾಕಲ್ಲ? ಅಲ್ಲಿಂದಾಚೆಗೆ ಇಂತಹ ಪ್ರಸಂಗಗಳು ನಡೆದಿದ್ದೇ ಸುಳ್ಳು ಎನ್ನುವಂತೆ ಸಹಜವಾಗಿ ನಡೆದುಕೊಳ್ಳುತ್ತಿದ್ದರು ಅಪ್ಪ, ಮಗಳು. ಆದರೂ ಭಾಮನ ಎದುರು ಎಚ್ಚರತಪ್ಪಿ ನಡೆದುಕೊಳ್ಳಬಾರದು ಎನ್ನುವುದು ಚಿದಾನಂದನ ಮನಸ್ಸಿನಲ್ಲಿ ಹೊಕ್ಕು ಕುಳಿತಿತ್ತು. ಆಡಿ ತೋರಿಸಲಾಗದ ಇಂತಹ ಪ್ರತಿರೋಧ ಅವಳ ಮನಸ್ಸಿನಲ್ಲೂ ಕೆಲಸ ಮಾಡುತ್ತಿದ್ದಿರಬಹುದೇ? ಅದರ ಫಲ ಸ್ವರೂಪವೆಂಬಂತೆ ಅವಳು ಅಪ್ಪನನ್ನು ಧಿಕ್ಕರಿಸಿ ನಡೆಯುವ ಧೈರ್ಯ ಮಾಡಿದಳೇ? ಛೇ ಛೇ, ಅದಕ್ಕೂ, ಇದಕ್ಕೂ ಯಾತರ ಸಂಬಂಧ? ಯಾವುದನ್ನು ಯಾವುದಕ್ಕೋ ಕೊಂಡಿ ಜೋಡಿಸುತ್ತಿದ್ದೇನೆ ಎಂದು ಸಮಾಧಾನ ಕಂಡುಕೊಳ್ಳಲೆತ್ನಿಸಿದ ಚಿದಾನಂದ.

